

ಡಾ.ವಿನೋದ ಛೆಬ್ಬಿ

ವಯಸ್ಸಾದಂತೆ ಬದುಕಿನಲ್ಲಿ ಮಾಗುತ್ತ ಇರುವಾಗ ಹಳೆಯ ಸಾವಿಗೆ ಹೊಸಹೊಸ ವ್ಯಾಖ್ಯೆಗಳು ಹೊಳೆಯುತ್ತವೆ.

# 330: ಹೊಸ ದಾರಿ - 70

ಸಾವಿನ ಮನೆಗೆ ಭೇಟಿಕೊಡುವುದರ ಬಗೆಗೆ ಹೋದಸಲ ಮಾತಾಡಿದೆವು. ಇಷ್ಟರಲ್ಲೇ ಒಬ್ಬರಿಗೆ ಸಂದೇಹ ಬಂದಿದೆ: ಸಾವಾಗಿರುವವರ ಮನೆಗೆ ಮಕ್ಕಳನ್ನು ಕರೆದೊಯ್ಯಬಹುದೆ? ಶವದರ್ಶನ ಮಕ್ಕಳಮೇಲೆ ಏನು ಪರಿಣಾಮ ಬೀರಬಹುದು ಎಂದು ಅಳುಕಿದೆ. ಸಾವಿನ ಸಮಯದಲ್ಲಿ ದೊಡ್ಡವರೇ ಸ್ವತಃ ಗಲಿಬಿಲಿಯಲ್ಲಿ ಇರಬೇಕಾದರೆ ಮಕ್ಕಳ ಬಗೆಗೆ ಏನು ನಿರ್ಧಾರ ತೆಗೆದುಕೊಳ್ಳುವುದು ಎಂದು ಪ್ರಶ್ನೆಯಾಗುತ್ತದೆ. ನನಗನಿಸುವ ಮಟ್ಟಿಗೆ ಮಕ್ಕಳಿಗೆ ಶವದರ್ಶನ ಖಂಡಿತವಾಗಿಯೂ ಮಾಡಿಸಬಹುದು. ಅವರಿಗೆ ಬದುಕುವ ಬಗೆಗೆ ಹೇಳಿಕೊಟ್ಟಂತೆ ಸಾವಿನ ಬಗೆಗೂ ಹೇಳಿಕೊಡುವುದು ಅತ್ಯಗತ್ಯ. ಇದರಲ್ಲಿರುವ ಬದುಕಿನ ಅನಿಶ್ಚಿತತೆಯು ಮಕ್ಕಳ ಜೀವನಶೈಲಿಯನ್ನು ರೂಪಿಸಿಕೊಳ್ಳುವ ನೀತಿಯ ಮೇಲೆ ಪ್ರಭಾವ ಬೀರುತ್ತದೆ. ಅವರ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯವಾಗುತ್ತದೆ. ಆದರೆ ಇಲ್ಲೆರಡು ಜಾಗ್ರತೆಯ ಕ್ರಮಗಳು: ಶವವನ್ನು ಸಮರ್ಪಕವಾಗಿ ಸ್ವಚ್ಛತೆಯಿಂದ ಕಾಪಿಟ್ಟಿರಬೇಕು (ಉದಾ. ಅಪಘಾತಕ್ಕೆ ಒಳಗಾಗಿ ವಿರೂಪಗೊಂಡ ಶವವು ಮಕ್ಕಳಿಗೆ ಆಘಾತ ಉಂಟುಮಾಡುತ್ತದೆ); ಹಾಗೂ ಆ ಸಮಯದಲ್ಲಿ ಹಿರಿಯರು ಮಕ್ಕಳ ಜೊತೆಗೇ ಇರಬೇಕು.

ಸಾವಿನ ಪ್ರಸಂಗವೊಂದು ಸತ್ತವರ ಹಾಗೂ ದುಃಖಿತರ ನಡುವಿನ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತದೆ. ಐವತ್ತು ವರ್ಷಗಳ ಹಿಂದೆ ನನ್ನ ಅಲ್ಪಪರಿಚಯದ ಹಿರಿಯರು ವಯಸ್ಸಾಗಿ ತೀರಿಕೊಂಡರು. ಅವರ ಅಂತ್ಯದರ್ಶನ ಮಾಡಿ ಹೊರಬಂದೆ. ಹೊರಗೆ ಕಟ್ಟೆಯ ಮೇಲೆ ಒಬ್ಬ ಹೆಂಗಸು ಮಂಡಿಯಮೇಲೆ ಗದ್ದವೂರಿ ಒಂಟಿಯಾಗಿ ಶೂನ್ಯದೃಷ್ಟಿಯಿಂದ ಕುಳಿತಿದ್ದನ್ನು ನೋಡಿದೆ. ಮಂಗಬುದ್ಧಿಯ ಕುತೂಹಲದಿಂದ 'ನೀವು ಮೃತರಿಗೆ ಏನಾಗಬೇಕು?' ಎಂದು ಕೇಳಿದೆ. ಆಕೆ ಕೊಟ್ಟ ಉತ್ತರ ಎದೆ ಇರಿಯುವಂತಿತ್ತು. 'ಏನೇನೋ ಆಗಬೇಕಿತ್ತು, ಆದರೆ ಒಂದೂ ಆಗಲಿಲ್ಲ!' ನನಗೆ ಅರ್ಥವೇ ಆಗಲಿಲ್ಲ. ಆಮೇಲೆ ಗೊತ್ತಾಯಿತು: ಆಕೆ ಮೃತರ ಹೆಂಡತಿ. ಸಾಂಪ್ರದಾಯಿಕ ವಿವಾಹ, ಸಾಂಪ್ರದಾಯಿಕ ದಾಂಪತ್ಯ. ಮಕ್ಕಳಿರಲಿಲ್ಲ. ಗಂಡ–ಹೆಂಡತಿ ಜೊತೆಯಾಗಿ ಮನೆಯ ಹೊರಗೆ ಕಾಲಿಟ್ಟವರಲ್ಲ, ಮನೆಯೊಳಗೂ ಮಾತಿಲ್ಲ. ಲೈಂಗಿಕ ತಜ್ಞನಾದ ನಂತರ ಹೊಳೆಯಿತು– ಅವರಲ್ಲಿ ಲೈಂಗಿಕ ಸಂಪರ್ಕವೇ ಇರಲಿಲ್ಲ! ಕಾಮಾಸಕ್ತಿ ಇಲ್ಲದ, ಅನ್ಯೋನ್ಯತೆ ಅಂದರೆ ಏನೆಂದು ಗೊತ್ತಿಲ್ಲದ ಸಂಗಾತಿಯ ಜೊತೆಗೆ ಒಲ್ಲದ ಸನ್ಯಾಸದಲ್ಲಿದ್ದ ಆಕೆಗೆ ಬದುಕಿಗೂ ಸಾವಿಗೂ ವಿಶೇಷ ಅಂತರವಿರಲಿಕ್ಕಿಲ್ಲ. ಛೆ, ಅಯ್ಯೋ ಪಾಪ ಎನ್ನಿಸಿತು. ಇನ್ನು, ಇಷ್ಟು ಬಾಳುಕಂಡಮೇಲೆ ಈ ಲೇಖನ ಬರೆಯುವಾಗ ಏನೆನಿಸುತ್ತಿದೆ? ಆಕೆ ಬದುಕಿರುವಾಗಲೇ ಯಾವೊತ್ತೋ ಸತ್ತಿದ್ದಳು! ಈ ಪ್ರಸಂಗದ ಬೆಳಕಿನಲ್ಲಿ ಆತ್ಮವೀಕ್ಷಣೆ ಮಾಡಿಕೊಂಡರೆ ವೈಚಿತ್ರ ವಿದ್ಯಮಾನವೊಂದು ಕಾಣುತ್ತದೆ: ವಯಸ್ಸಾದಂತೆ ಬದುಕಿನಲ್ಲಿ ಮಾಗುತ್ತ ಇರುವಾಗ ಹಳೆಯ ಸಾವಿಗೆ ಹೊಸಹೊಸ ವ್ಯಾಖ್ಯೆಗಳು ಹೊಳೆಯುತ್ತವೆ. ಯಾಕೆಂದರೆ ಸಾವು ಅಷ್ಟೊಂದು ನಿಗೂಢ, ಅರ್ಥಗರ್ಭಿತ, ರಹಸ್ಯಮಯ. ಅಂತೆಯೇ ವಯಸ್ಸಾದಂತೆ ಯಾವೊತ್ತೋ ಸತ್ತ ವ್ಯಕ್ತಿಯ ಬಗೆಗೆ ನಮ್ಮ ಅನಿಸಿಕೆಗಳು ಬದಲಾಗುವುದು ಸಹಜ. ಜಗಳಗಂಟ ಗಂಡ ತೀರಿಕೊಂಡಾಗ ಮನಸಾರೆ ದುಃಖಿಸಿದ ಹೆಂಡತಿ ವರ್ಷದ ನಂತರ ಹೊಸ ಸ್ನೇಹಿತನ ಜೊತೆ ನನ್ನಲ್ಲಿಗೆ ಬಂದಿದ್ದು ಬಹುಶಃ ಒಬ್ಬರ ಸಾವು ಇನ್ನೊಬ್ಬರಿಗೆ ಬಿಡುಗಡೆಯಾಗಿ ಬರುತ್ತದೆ ಎಂದೆನಿಸುತ್ತದೆ. ಹಾಗೆಯೆ, ಮರಣಿಸಿದ ತಾಯ್ತಂದೆಯ ಇಷ್ಟದಂತೆ ನೀವು ನಡೆದುಕೊಂಡಿರಲಿಕ್ಕಿಲ್ಲ; ಅದಕ್ಕೆಂದೇ ಅವರು ನನ್ನನ್ನು ಪ್ರೀತಿಸಲಿಲ್ಲ ಎಂದು ನಿಮಗೆ ಮುಂಚೆ ಅನ್ನಿಸಿ ಅಸಾಮರ್ಥ್ಯ ಕಾಡಿರಬಹುದು. ಈಗ ನೋಡಿದರೆ, 'ತಪ್ಪು ನನ್ನಲ್ಲಿಲ್ಲ; ಪ್ರೀತಿಕೊಡದೆ ಅವರೇ ತಪ್ಪು ಮಾಡಿದ್ದಾರೆ' ಮನವರಿಕೆ ಆಗಬಹುದು. ಪರಿಣಾಮವಾಗಿ ಅವರ ಮೇಲೆ ಕೋಪ ಬಂದರೆ ತಪ್ಪಿತಸ್ಥ ಭಾವ ಮೂಡಬೇಕಿಲ್ಲ. ಇಂಥ ಕಾರಣಗಳಿಗಾಗಿ ತಾಯ್ತಂದೆಯರ ತಿಥಿ ಮಾಡದಿರುವವರನ್ನು ನೋಡಿದ್ದೇನೆ.

ಇಷ್ಟರಲ್ಲೇ ಒಂದು ವಿಚಾರ ಬಂತು. ಹೆಚ್ಚಿನವರು ಸಾಯಬೇಕೆಂದು ಸಾಯುವುದಿಲ್ಲ; ಬದುಕಲು ಆಗದೆಂದು ಸಾಯುತ್ತಾರೆ. ಎಲ್ಲವನ್ನೂ ಮುಗಿಸಿ ಸಂತೃಪ್ತಿಯಿಂದ ಕಣ್ಣುಮುಚ್ಚುವವರು ಅಪರೂಪ. ನಮ್ಮ ಸಹಾಯಕಿಯ ಸಂಬಂಧಿಕಳು ವಯಸ್ಸಾದವಳು. ಹಾಸಿಗೆ ಹಿಡಿದಿದ್ದಳು. ಗಂಡ ಇರುವಾಗ ಖರೀದಿಸಿದ ಪುಟ್ಟ ನಿವೇಶನದಲ್ಲಿ ಕಚ್ಚಾಮನೆ ಕಟ್ಟಿಕೊಂಡು ಒಬ್ಬನೇ ಮಗನೊಂದಿಗೆ ವಾಸವಾಗಿದ್ದಳು. ಮಗನ ಸಂಪಾದನೆ ಅಷ್ಟಕ್ಕಷ್ಟೆ. ನಿವೇಶನ ಮಾರಿ ಇನ್ನೊಂದು ಕಡೆ ಹೋಗುವುದು ಎಂದಾಯಿತು. ಅಂದಿನಿಂದ ಮುದುಕಿ ಹಾಸಿಗೆ ಹಿಡಿದಳು. ಕೆಲವು ದಿನಗಳಲ್ಲಿ ಅನ್ನನೀರು ಇಳಿಯದೆ ಸಾಯಲು ತೊಡಗಿದಳು. ವೈದ್ಯರೂ ಬದುಕುವ ಆಸೆಯನ್ನು ಬಿಡಲು ಹೇಳಿದರು. ಕೊನೆಯ ಗಳಿಗೆಯ ತಯಾರಿ ನಡೆಯಿತು. ಮನೋಚಿಕಿತ್ಸೆಯ ಸಾಮರ್ಥ್ಯ ಅರಿತಿದ್ದ ನಮ್ಮ ಸಹಾಯಕಿಗೆ ಥಟ್ಟನೆ ಹೊಳೆಯಿತು. ಸಾಯುವವಳ ಕಿವಿಯಲ್ಲಿ ನಿಧಾನವಾಗಿ ಪದೇಪದೇ ಉಸುರಿದಳು. 'ಅಜ್ಜಿ, ನೀನು ಬದುಕುವುದು ಎಂದಾದರೆ ಈ ಸೈಟು, ಮನೆ ಮಾರುವುದಿಲ್ಲ. ಈ ಮನೆಯ ಯಜಮಾನತಿ ನೀನು!' ಕೈ ಸವರುವುದನ್ನಂತೂ ಬಿಡಲೇ ಇಲ್ಲ. ಕ್ರಮೇಣ ಅಜ್ಜಿಗೆ ಎಚ್ಚರ ಬರಲು ಆರಂಭಿಸಿತು. ಬಾಯಿಯಲ್ಲಿ ತುತ್ತು ಇಳಿಯತೊಡಗಿತು. ಒಂದು ವಾರದಲ್ಲಿ ಓಡಾಡುವಂತಾದಳು! ನಮ್ಮ ಸಹಾಯಕಿಯನ್ನು ಸಂಬಂಧಿಕರು ಪವಾಡದ ಮಾತೆಯಂತೆ ಕಾಣುತ್ತಿದ್ದಾರೆ.

ಆತ್ಮೀಯರ ಸಂಬಂಧಿಕರು ಯಾರಾದರೂ ತೀರಿಕೊಂಡಲ್ಲಿ ದುಃಖಿತರನ್ನು ಮುಖತಃ ಭೇಟಿಮಾಡಲು ಸಾಧ್ಯವಾಗಲಿಕ್ಕಿಲ್ಲ. ಆಗ ಸಂತೈಕೆ ಹೇಗೆ? 'ನಾನು ನಿಮ್ಮೊಂದಿಗೆ ಇದ್ದೇನೆ,' 'ನಿಮ್ಮ ದುಃಖದಲ್ಲಿ ನಾನೂ ಭಾಗಿ' ಇತ್ಯಾದಿ ನುಡಿಗಟ್ಟುಗಳು ಬಳಕೆಯಲ್ಲಿವೆ. ಹೆಚ್ಚಿನಂಶ 'ಮೃತರ ಆತ್ಮಕ್ಕೆ ಶಾಂತಿ ಸಿಗಲಿ' ಎನ್ನುವ ಮಾತೂ ಅಷ್ಟೆ (ಇಂಗ್ಲಿಷಿನಲ್ಲಿ **Rest in peace**ಎಂದು ಹೇಳಲು ಹೋಗಿ, ಚಿಕ್ಕದಾಗಿ **RIP** ಎಂದು ಸಂದೇಶ ವಾಟ್ಸ್ಆ್ಯಪ್‌ನಲ್ಲಿ ಹಾಕುವ ಹೊಸ ರೂಢಿ). ಈ ಔಪಚಾರಿಕತೆಯನ್ನು ಕೈಬಿಟ್ಟು ವೈಯಕ್ತಿಕವಾಗಿ ಇನ್ನೇನಾದಾರೂ ಮಾಡಬಹುದೆ ಎಂದು ಯೋಚಿಸುವಾಗ, ನನ್ನ ಶಿಷ್ಯೆಯ ತಂದೆ ನಿಧನವಾದಾಗ ನಾನು ಕಳಿಸಿದ ಸಂದೇಶ ನೆನಪಾಯಿತು:

'ನಿಮ್ಮ ತಂದೆಯವರು ಅಗಲಿದ ಸುದ್ದಿ ಕೇಳಿ ತೀವ್ರ ಸಂತಾಪವಾಯಿತು.'

'ನೀವು ಎಷ್ಟೊಂದು ದುಃಖ ಅನುಭವಿಸಿದ್ದೀರಿ, ಹಾಗೂ ನಿಮ್ಮ ಮನದಲ್ಲಿ ಏನೇನು ಭಾವನೆಗಳು ಹುಟ್ಟುತ್ತಿವೆ ಎನ್ನುವುದು ನನ್ನ ಕಲ್ಪನೆಗೆ ಕೈಗೆಟುಕುತ್ತಿದೆ. ನನ್ನ ತಂದೆಯ ಸ್ಮಶಾನಯಾತ್ರೆಯಲ್ಲಿ ಅವರ ಭಾರವನ್ನು ನನ್ನ ಹೆಗಲಮೇಲೆ ಹೊತ್ತಿದ್ದಾಗ ದುಃಖದ ಅಲೆಗಳು ನನ್ನನ್ನು ಎತ್ತಿಹಾಕಿ ಕುಸಿಯುವಂತಾಗಿದ್ದು ನೆನಪಿಗೆ ಬರುತ್ತಿದೆ.'

'ಹಿರಿಯರು ಲೋಕಾತೀತರಾಗುವಾಗ ತಮ್ಮ ಅನುಭವಗಳನ್ನೂ ಸಿಹಿಕಹಿ ನೆನಪುಗಳನ್ನೂ ಬಿಟ್ಟು ಹೋಗುತ್ತಾರೆ. ಅವರು ಹೇಗೆ ಬದುಕಿದರು, ಅಥವಾ ಹೇಗೆ ಬದುಕಲಾಗಲಿಲ್ಲ ಎನ್ನುವ ಅಂಶಗಳು ನಮ್ಮ ಬದುಕಿಗೆ ಸ್ಫೂರ್ತಿಯಾಗುತ್ತವೆ; ನಮಗೆ ಮಾರ್ಗದರ್ಶನ ಮಾಡುತ್ತವೆ.'

'ಈ ಅಗಲಿಕೆಯನ್ನು ಸಹಿಸಿಕೊಳ್ಳಲು ನಿಮ್ಮೊಳಗಿರುವ ಶಕ್ತಿ–ಸಾಮರ್ಥ್ಯ ಹೊರಬರಲೆಂದು ಹೃದಯಪೂರ್ವಕ ಆಶಿಸುತ್ತೇನೆ. ಹಾಗೆಯೇ, ಈ ಸಾವಿಗಿರುವ ಅರ್ಥವನ್ನೂ ಉದ್ದೇಶವನ್ನೂ ಕಂಡುಕೊಳ್ಳಲು ಯೋಚಿಸಿ. ಮುಂದೆ ಅವಕಾಶ ಮಾಡಿಕೊಂಡು ಭೇಟಿಯಾಗಿ ಇದರ ಬಗೆಗೆ ಮಾತಾಡೋಣ.'

ಒಟ್ಟಿನಲ್ಲಿ, ನಿಮ್ಮ ಸಂದೇಶದಲ್ಲಿ ಸಂತಾಪದ ಜೊತೆಗೆ ನಿಮ್ಮಿಬ್ಬರ ಸಂಬಂಧದ ಮಾರ್ದವತೆಯೂ ಇಣುಕುತ್ತಿರಲಿ. ಇದು ದುಃಖಿತರಿಗೆ ಹೆಚ್ಚು ಸಾಂತ್ವನ ನೀಡುತ್ತದೆ ಎಂದು ನನಗನಿಸುತ್ತದೆ.

ನಿಮ್ಮ ಅನುಭವವೇನು?

**ಸಂಪರ್ಕಕ್ಕೆ: 8494933888;**

**Email: vinod.chebbi@gmail.com**